ದಿನಾಂಕ 25-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

ನಾನು ನೀಡಿದ ಸಾಕ್ಷ್ಯದ ಆಧಾರದ ಮೇಲೆ ಪೋಲೀಸರು ಅಂತಿಮ ವರದಿಯನ್ನು ಹಾಕಿದ್ದಾರೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ಕೊಲೆಯ ಆರೋಪವನ್ನು ಮಾಡಿದ್ದೇನೆ ಎಂದರೆ ನಿಜ. ಜಿಲ್ಲಾ ನ್ಯಾಯಾಲಯದಲ್ಲಿ ವಾದಿಯ ವಿರುದ್ದ ಸಾಕ್ಷ್ಯವನ್ನು ನೀಡಿದ್ದೇನೆ ಎಂದರೆ ನಿಜ. ಶಕ್ತಿ ಪತ್ರಿಕೆಯಲ್ಲಿಯೂ ಸಹ ನನ್ನ ಕೊಲೆ ಪ್ರಕರಣದ ಬಗ್ಗೆ ಮಾಹಿತಿ ಬಂದಿತ್ತು ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ಧ ಹಗೆತನ ತೀರಿಸಿಕೊಳ್ಳಲು ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ 5 ನೇ ಪುಟದಲ್ಲಿ 3 ನೇ ಸಾಲಿನಲ್ಲಿ ಮಾನ್ಯ ನ್ಯಾಯಾಧೀಶರು ತಾವು ನಿನ್ನ ಪರವಾಗಿ ತೀರ್ಪು ಕೊಡುತ್ತೇನೆ ಎಂದು ಹೇಳಿದ ದಿವಸದ  ಮಾರನೇ ದಿವಸ ತೀರ್ಪು ಕೊಟ್ಟಿಲ್ಲ ಎಂದು ಹೇಳಿರುತ್ತೇನೆ ಎಂದರೆ ನಿಜ. ನನಗೆ ಅಪಘಾತವೂ ಸಹ ಆಗಿರಲಿಲ್ಲ ಆದಾಗ್ಯೂ ಸಹ ವಾದಿಯನ್ನು ಸೇರಿಸಿಕೊಂಡು ನ್ಯಾಯಾಧೀಶರ ವಿರುದ್ಧ ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗ ಪರಿಚಯವಿರುವ ವೈದ್ಯರ ಬಳಿ ಸುಳ್ಳು ಗಾಯದ ಪ್ರಮಾಣಪತ್ರ ಪಡೆದು ಪೋಲೀಸರಿಗೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸೆಷನ್ಸ್ ಪ್ರಕರಣದಲ್ಲಿ ಆದ ತೀರ್ಪಿನ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸದರಿ ತೀರ್ಪಿನಲ್ಲಿ ವೈದ್ಯರು ನನಗೆ ಸಹಾಯ ಮಾಡಲು ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ ಎಂದು ಉಲ್ಲೇಖ ಇದೆ, ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ತಂದೆ ಮೃತರಾಗಿದ್ದಾರೆ ಎಂದರೆ ನಿಜ. ಅವರು ಮೃತರಾದಾಗ ನಾನು ಹೋಗಿಲ್ಲ. ನನಗೆ ಮೊದಲಿನಿಂದಲೂ ವಾದಿ ಮತ್ತು ವಾದಿಯ ಕುಟುಂಬದ ಮೇಲೆ ಹಗೆತನ ಇದೆ ಎಂದರೆ ಸರಿಯಲ್ಲ. ಆಸ್ತಿ ಸಮಸ್ಯೆಗೋಸ್ಕರ ನಾನು ಹಗೆತನ ಬೆಳೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಗೋಸ್ಕರ ನಾನು ವಾದಿಯ ವಿರುದ್ಧ ಸುಳ್ಳು ಪ್ರಕರಣವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಉಪದ್ರವದಿಂದ ವಾದಿ ಮತ್ತು ವಾದಿಯ ಕುಟುಂಬಕ್ಕೆ ಸಾಕಷ್ಟು ತೊಂದರೆಯಾಯಿತು ಎಂದರೆ ಸರಿಯಲ್ಲ. ಕೊಲೆ ಪ್ರಕರಣದ ನಿಮಿತ್ತ ವಾದಿಯ ಜೀಪು ಗರಿಷ್ಠ ಮೂರು ತಿಂಗಳುಗಳ ಕಾಲ ಯಾವುದೇ ಉಪಯೋಗಕ್ಕೆ ಬಾರದೆ ಠಾಣೆಯಲ್ಲಿ ಇತ್ತು ಎಂದರೆ ಸಾಕ್ಷಿಯು ಒಂದೂವರೆ ತಿಂಗಳು ಮಾತ್ರ ಇತ್ತು ಎನ್ನುತ್ತಾರೆ. ಕೊಡಗಿನಲ್ಲಿ ಎಸ್ಟೇಟ್‌ಗಳಿಗೆ ಹೋಗಲು ಜೀಪುಗಳು

ಸುಲಭವಾಗಿ ಬಾಡಿಗೆಗೆ ಸಿಗುವುದಿಲ್ಲ ಎಂದರೆ ನಿಜ. ನಾನು ನೀಡಿದಂತಹ ತೊಂದರೆಯಿಂದ ವಾದಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದರೆ ಸರಿಯಲ್ಲ. ನಾನು ನೀಡಿದ ತೊಂದರೆಯಿಂದ ವಾದಿ 6 ತಿಂಗಳುಗಳ ಕಾಲ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದರೆ ಸರಿಯಲ್ಲ. ನನ್ನ ಸುಳ್ಳು ದೂರಿನಿಂದ ವಾದಿ ತುಂಬಾ ಪ್ರಯಾಸ ಪಡಬೇಕಾಯಿತು ಎಂದರೆ ಸರಿಯಲ್ಲ. ನಾನು ಪೋಲೀಸರನ್ನು ಅನಗತ್ಯವಾಗಿ ವಾದಿಯ ಮನೆಯ ಮುಂದೆ ಕರೆತರುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ಹೂಡಿದ್ದ ರಿಂದ ವಾದಿ ಉಚ್ಚ ನ್ಯಾಯಾಲಯಕ್ಕೆ ಮತ್ತು ಜಿಲ್ಲಾ ನ್ಯಾಯಾಲಯಕ್ಕೆ ಹೋಗಬೇಕಾಗಿ ಆನಂತರ ವಕೀಲರಿಗೂ ಸಹ ಶುಲ್ಕವನ್ನು ಕೊಡಬೇಕಾಯಿತು ಎಂದರೆ ಸರಿಯಲ್ಲ. ಸೆಷನ್ಸ್ ನ್ಯಾಯಾಲಯದಲ್ಲಿ ವಾದಿಯು ಅನಾವಶ್ಯಕವಾಗಿ ಸುಮಾರು ವರ್ಷಗಳ ಕಾಲ ಭಾಗವಹಿಸಬೇಕಾಯಿತು ಎಂದರೆ ನಿಜ. ನನ್ನ ಮೇಲೆ ಯಾವುದೇ ರೀತಿಯ ಕೊಲೆ ಪ್ರಯತ್ನ ಆಗದಿದ್ದರೂ ನಾನು ದಾಯಾದಿ ಮತ್ಸರದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಆದ ಎಲ್ಲಾ ನಷ್ಟಗಳಿಗೆ ನಾನೇ ಜವಾಬ್ದಾರನು ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾಧಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)